**ಪಿಡಬ್ಲ್ಯೂ: 02**

**ದಿಃ 28-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಶ್ರೀ. ವೈ ಎಂ ಆರ್ 2 ನೇ ಪ್ರತಿವಾದಿ ಪರ ವಕೀಲರಿಂದಃ**

ಪ್ರಕರಣ ದಾಖಲಿಸುವ ಕಾಲಕ್ಕೆ ನಾನು ವಾದಿ ನನ್ನ ಗಂಡನೊಂದಿಗೆ ಬಂದಿರಲಿಲ್ಲ ಎಂದರೆ ಸರಿ. ನನ್ನ ಗಂಡನೊಂದಿಗೆ ನಾನು ಬರದೇ ಇದ್ದ ಕಾರಣ ನನ್ನ ಗಂಡ ದಾಖಲಿಸಿದ ದಾವೆಯ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಭಾಗ ಕೋರಿ ಪ್ರಕರಣ ದಾಖಲಿಸಿದ್ದಾರೆಂದು ನುಡಿಯುತ್ತಾರೆ. ನನ್ನ ಗಂಡ ಪ್ರಸ್ತುತ ಪ್ರಕರಣ ದಾಖಲಿಸುವುದಕ್ಕೂ ಮುಂಚೆ ಹಿರಿಯ ದಿವಾಣಿ ನ್ಯಾಯಾಲಯ, ಚನ್ನಗಿರಿಯಲ್ಲಿ ಇದೇ ಪ್ರತಿವಾದಿಗಳ ವಿರುದ್ಧ ಅಸಲು ದಾವ ನಂ. 09/2009 ಅಂತಾ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವ ನಂ. 09/2009 ನ್ನು ನನ್ನ ಗಂಡ ದಾಖಲಿಸಿದ್ದ ವಿಷಯ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಏನು ಆಗಿದೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣವನ್ನು ನನ್ನ ಗಂಡ ಯಾವ ಯಾವ ಆಸ್ತಿಗಳನ್ನು ಸೇರಿಸಿ ಪ್ರಕರಣ ದಾಖಲಿಸಿದ್ದರು ನನಗೆ ಗೊತ್ತಿಲ್ಲ. ಅಸಲು ದಾವ ನಂ. 09/2009 ರ ಪ್ರಕರಣ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಜಾ ಆದೇಶದ ವಿರುದ್ಧ ನನ್ನ ಗಂಡ ಆರ್ ಎ ನಂ.01/2018 ಅಂತಾ ಮೇಲ್ಮವಿ ಸಲ್ಲಿಸಿದ್ದು, ಸದರಿ ಮೇಲ್ಮವಿ ಸಹ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

ಪ್ರಕರಣವನ್ನು ನಾಲ್ಕು ಗಂಡು ಮಕ್ಕಳು ಮತ್ತು ಆರು ಜನ ಹೆಣ್ಣು ಮಕ್ಕಳ ವಿರುದ್ಧ ದಾಖಲಿಸಲಾಗಿದೆ. 1975 ರ ನಂತರ ಇಲ್ಲಿಯವರೆಗೆ ನಾಲ್ಕು ಗಂಡು ಮಕ್ಕಳು ಮತ್ತು ಆರು ಜನ ಹೆಣ್ಣು ಮಕ್ಕಳು ಒಂದೇ ಮನೆಯಲ್ಲಿ ವಾಸ ಇಲ್ಲ ಎಂದರೆ ಸರಿ. ನನ್ನ ಗಂಡ ವಾದಿ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆಂದರೆ ಸರಿ. ಸುಮಾರು 10 ವರ್ಷಗಳ ಹಿಂದೆ ನನ್ನ ಗಂಡ ನಿವೃತ್ತಿ ಹೊಂದಿದ್ದಾರೆ. ನನ್ನ ಗಂಡ ನಿವೃತ್ತಿ ಹೊಂದುವ ಸಮಯದಲ್ಲಿ ಶಿವಮೊಗ್ಗದಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು. ಶಿವಮೊಗ್ಗದಲ್ಲಿ ನನ್ನ ಗಂಡ ವಾದಿಗೆ ಸ್ವಂತ ಮನೆ ಇತ್ತು. ಸದರಿ ಮನೆ ನನ್ನ ಗಂಡ ವಾದಿಗೆ 30 ವರ್ಷಗಳ ಹಿಂದೆ ಹೌಸಿಂಗ್ ಬೋರ್ಡ್ ಇಂದ ಮನೆ ಬಂದಿತ್ತು. ಸದರಿ ಮನೆ ಆಸ್ತಿಯನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ. ಸದರಿ ಮನೆಯನ್ನು ನನ್ನ ಗಂಡನಿಗೆ ಹೌಸಿಂಗ್ ಬೋರ್ಡ್‌ರವರು 30,000/- ಕ್ಕೆ ಮಂಜೂರು ಮಾಡಿದ್ದು ಆ ಬಗ್ಗೆ ದಾಖಲೆ ನೋಡಿಲ್ಲ.

ನನ್ನ ವಿವಾಹ 40 ವರ್ಷಗಳ ಹಿಂದೆ ಆಗಿದೆ. ನಾವು ವಿವಾಹವಾದ ಕಾಲಕ್ಕೆ ನನ್ನ ಮಾವ ಬಸಪ್ಪರವರಿಗೆ ಭಾಗದಲ್ಲಿ 12 ಎಕರೆ ಜಮೀನು ಬಂದಿತ್ತು. ವಿಭಾಗವಾಗುವ ಕಾಲಕ್ಕೆ ದಾವ ಅನುಸೂಚಿ ಕ್ರ.ಸಂ. 8 ರ ಆಸ್ತಿ ನನ್ನ ಗಂಡ ವಾದಿಗೆ ನನ್ನ ಮಾವ ಬಸಪ್ಪರವರು ಹಂಚಿಕೆ ಮಾಡಿದ್ದ ವಿಷಯ ನನಗೆ ಗೊತ್ತಿಲ್ಲ. ಪ್ರಕರಣ ದಾಖಲಿಸುವ ಕಾಲಕ್ಕೆ ದಾವ ಅನುಸೂಚಿ ಕ್ರ.ಸಂ.8 ರ ಆಸ್ತಿ ಯಾರ ಹೆಸರಿಗೆ ಇತ್ತು ಎಂದು ನಾನು ತಿಳಿದುಕೊಂಡಿಲ್ಲ. ದಾವ ಆಸ್ತಿಗಳ ಸ.ನಂ. ವಿಸ್ತೀರ್ಣ ಮತ್ತು ಚೆಕ್ಕುಬಂದಿಗಳ ಬಗ್ಗೆ ನಾನು ಜಮೀನುಗಳಿಗೆ ಹೋಗದೆ ಇದ್ದ ಕಾರಣ ವಿವರ ಗೊತ್ತಿಲ್ಲ.

ದಾವ ಅನುಸೂಚಿ ಕ್ರ.ಸಂ.1 ರಿಂದ 15 ರ ಆಸ್ತಿಗಳು ಪ್ರಸ್ತುತ ಯಾರ ಯಾರ ಹೆಸರಿನಲ್ಲಿವೆ ಎಂದು ನಾನು ತಿಳಿದುಕೊಂಡಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಕಾಣಿಸಿದ ವಿವರದ ಮಾಹಿತಿ ನನಗೆ ಇದೆ. ನನ್ನ ಪ್ರಮಾಣ ಪತ್ರದಲ್ಲಿ ಕಾಣಿಸಿದ ಆಸ್ತಿಗಳು ಯಾರ ಯಾರ ಹೆಸರಿನಲ್ಲಿವೆ ಎಂದು ಹೇಳಲಾಗುವುದಿಲ್ಲ. ನನಗೆ ಇಬ್ಬರು ಅಣ್ಣಂದಿರರು ಇದ್ದಾರೆ, ಅವರೆಂದರೆ, ವಿರುಪಾಕ್ಷಪ್ಪ ಮತ್ತು ಶಿವಲಿಂಗಪ್ಪ. ಇಬ್ಬರೂ ಸೋಮನಾಳದಲ್ಲಿ ವಾಸವಿದ್ದು ವ್ಯವಸಾಯ ಮಾಡುತ್ತಾರೆ. ದಾವ ಅನುಸೂಚಿ ಕ್ರ.ಸಂ.8 ರ ಆಸ್ತಿಯ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿದ್ದ ಬಗ್ಗೆ ನನಗೆ ಹೇಳಲಾಗುವುದಿಲ್ಲ. ಶಿವಮೊಗ್ಗದಲ್ಲಿರುವ ಮನೆಯನ್ನು ನಾವು ಖಾಲಿ ಮಾಡಿ 25 ವರ್ಷಗಳಾಗಿವೆ. ಪ್ರಸ್ತುತ ಶಿವಮೊಗ್ಗದ ಮನೆಯಲ್ಲಿ ನನ್ನ ಮಗಳು ಮತ್ತು ಅಳಿಯ ವಾಸವಿದ್ದಾರೆ. ನನ್ನ ಗಂಡ ಈ ಹಿಂದೆ ದಾಖಲಿಸಿದ್ದ ಪ್ರಕರಣವನ್ನು ಯಾವ ಯಾವ ಆಸ್ತಿಗಳ ಮೇಲೆ ದಾಖಲಿಸಿದ್ದರು ಎಂಬ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ.

1 ನೇ ಪ್ರತಿವಾದಿ ಪ್ರಸ್ತುತ ದಾವಣಗೆರೆಯಲ್ಲಿ ವಾಸವಿದ್ದಾರೆ. 1 ನೇ ಪ್ರತಿವಾದಿ ನೌಕರಿಯಲ್ಲಿದ್ದು ಪ್ರಸ್ತುತ ನಿವೃತ್ತರಾಗಿ ದಾವಣಗೆರೆಯಲ್ಲಿ ವಾಸವಿದ್ದಾರೆ. 1 ನೇ ಪ್ರತಿವಾದಿ ತಾನು ಸೇವೆ ಸಲ್ಲಿಸುವ ಕಾಲಕ್ಕೆ ಎಲ್ಲೆಲ್ಲಿ ಸೇವೆ ಸಲ್ಲಿಸಿದ್ದಾರೋ ಅಲ್ಲೆಲ್ಲಾ ವಾಸವಿದ್ದಾರೆಂದರೆ ಸರಿ. ನವಿಲೆಹಾಳ್ ಗ್ರಾಮದಲ್ಲಿ 1 ನೇ ಪ್ರತಿವಾದಿ ನನ್ನ ಮತ್ತು ನಮ್ಮ ಮಾವನೊಂದಿಗೆ ಒಟ್ಟಿಗೆ ವಾಸವಿರಲಿಲ್ಲ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳು ನವಿಲೆಹಾಳ್ ಗ್ರಾಮದಲ್ಲಿ ಪ್ರತ್ಯೇಕವಾಗಿ ವಾಸವಿದ್ದು, 2 ಮತ್ತು 3 ನೇ ಪ್ರತಿವಾದಿಗಳು ತಲಾ 20 ಎಕರೆ ಜಮೀನುಗಳನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದಾರೆ. ನನ್ನ ಮಾವ ಮರಣ

ಹೊಂದುವ ಕಾಲಕ್ಕೆ 2 ಮತ್ತು 3 ನೇ ಪ್ರತಿವಾದಿಗಳೊಂದಿಗೆ ವಾಸವಿದ್ದರು. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕೆಲವೊಂದು ದಾವ ಆಸ್ತಿಗಳು 1 ರಿಂದ 3 ನೇ ಪ್ರತಿವಾದಿಗಳ ಹೆಸರಿಗೆ ಇವೆ ಎಂದು ಬರೆಸಿದ್ದು, ಅಂತಹ ಆಸ್ತಿಗಳ ವಿವರವನ್ನು ಹೇಳಲಾಗುವುದಿಲ್ಲ. 1 ರಿಂದ 3 ನೇ ಪ್ರತಿವಾದಿಗಳು ತಮ್ಮ ತಮ್ಮ ಹೆಸರಿಗೆ ಕ್ರಯಕ್ಕೆ ಪಡೆದ ಜಮೀನುಗಳನ್ನು ಅವರವರೇ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಾ ಬಂದಿದ್ದಾರೆಂದರೆ ನನಗೆ ಗೊತ್ತಿಲ್ಲ. ನನ್ನ ಮಾವ ಜೀವಂತ ಇದ್ದಾಗ ಅವರ ಹೆಸರಿಗೆ ಒಟ್ಟು ಎಷ್ಟು ಆಸ್ತಿ ಇತ್ತು ಎಂದು ಹೇಳಲಾಗುವುದಿಲ್ಲ. ನನ್ನ ಮಾವ ಬಸಪ್ಪರವರು ತಮ್ಮ ಜೀವಿತಾ ಕಾಲದಲ್ಲಿ ಅವರ ಹೆಸರಿಗೆ ಇದ್ದ ಎಲ್ಲಾ ಆಸ್ತಿಗಳನ್ನು ತನ್ನ ಮಕ್ಕಳು, ಮೊಮ್ಮಕ್ಕಳು ಮತ್ತು ಸೊಸೆಯಂದಿರರ ಹೆಸರಿಗೆ ಮರಣ ಶಾಸನ ಪತ್ರ ಮತ್ತು ದಾನ ಪತ್ರಗಳನ್ನು ಬರೆದುಕೊಡುವುದರ ಮೂಲಕ ಹಂಚಿಕೆ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನನ್ನ ಮಾವ ಬರೆದುಕೊಟ್ಟ ದಾಖಲೆಗಳ ಪ್ರ ಕಾರ ಆಸ್ತಿಗಳು ಕಂದಾಯ ದಾಖಲೆಗಳಲ್ಲಿ ಹೆಸರುಗಳು ಬದಲಾವಣೆಗಳಾಗಿವೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಗಂಡ ವಾದಿ ನನ್ನ ಮಾವ ಬರೆದುಕೊಟ್ಟ ದಾನ ಪತ್ರದ ಆಧಾರದ ಮೇಲೆ ಬದಲಾವಣೆಯಾದ ಕಂದಾಯ ದಾಖಲೆಗಳನ್ನು ಪ್ರಶ್ನಿಸಿ ದಾವಣಗೆರೆಯ ಉಪವಿಭಾಗಧಿಕಾರಿ ಕಛೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಜಾ ಆದ ನಂತರ ಸದರಿ ಕಂದಾಯ ದಾಖಲೆಗಳನ್ನು ಪ್ರಶ್ನಿಸಿ ನನ್ನ ಗಂಡ ಈ ಮೊದಲು ಅಸಲು ದಾವ ನಂ. 09/2009 ರ ಪ್ರಕರಣ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣವನ್ನು ನ್ಯಾಯಾಲಯ ವಜಾ ಮಾಡಿದ್ದರು ಸಹ ಬೇರೆ ಆಸ್ತಿಗಳನ್ನು ಸೇರಿಸಿ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರಸ್ತುತ ಪ್ರಕರಣ ದಾಖಲಿಸಿದ್ದೇವೆಂದರೆ ಸರಿಯಲ್ಲ. ಅಸಲು ದಾವ ನಂ. 09/2009 ರ ಪ್ರಕರಣದಲ್ಲಿ ನನ್ನ ಗಂಡ ವಾದಿ ಈ ಪ್ರಕರಣದ ದಾವ ಅನುಸೂಚಿ ಕ್ರ.ಸಂ.8 ರ ಆಸ್ತಿಯನ್ನು ಸೇರಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಅಸಲು ದಾವ ನಂ. 09/2009 ರ ಪ್ರಕರಣದಲ್ಲಿ ಈ ಪ್ರಕರಣದಲ್ಲಿ ಸಲ್ಲಿಸಿದ್ದ ಪ್ರತಿವಾದ ಪತ್ರವನ್ನು ಆ ಪ್ರಕರಣದಲ್ಲಿ ಸಲ್ಲಿಸಿದ್ದು ಮತ್ತು ಸದರಿ ಪ್ರ ಕರಣ ವಜಾ ಆಗಿತ್ತು ಎಂದರೆ ಗೊತ್ತಿಲ್ಲ. ಅಸಲು ದಾವ ನಂ. 09/2009 ರ ಪ್ರಕರಣದಲ್ಲಿ ಈ ಪ್ರಕರಣದಲ್ಲಿ ಕಾಣಿಸಿದ ದಾವ ಅನುಸೂಚಿ ಕ್ರ.ಸಂ.8 ರ ಆಸ್ತಿಯನ್ನು 2 ನೇ

ಪ್ರತಿವಾದಿ ಕಾಣೆಸಿಲ್ಲ ಎಂದು ಪ್ರತಿವಾದಿಸಿದ್ದ ಕಾರಣ ಈ ಪ್ರಕರಣದಲ್ಲಿ ನಾನು ದಾವ ಅನುಸೂಚಿ ಕ್ರ.ಸಂ.8 ರ ಆಸ್ತಿಯನ್ನು ಸೇರಿಸಿ ಇತರೆ ಆಸ್ತಿಗಳಲ್ಲಿ ವಿಭಾಗ ಕೋರಿ ಪ್ರಸ್ತುತ ಪ್ರಕರಣ ದಾಖಲಿಸಿದ್ದೇವೆಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದುಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.

**<u>ಪಿಡಬ್ಲ್ಯೂ: 02</u>**

**<u>ದಿಃ 01-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಶ್ರೀ. ಎಂ ಟಿ ಎಸ್ ವಾದಿ ಪರ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

**<u>(ಶ್ರೀ. ವೈ ಎಂ ಆರ್ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.)</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ.,

ಚನ್ನಗಿರಿ.

**<u>ಪಿಡಬ್ಲ್ಯೂ : 01</u>**

**<u>ದಿಃ 25-10-2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ನ್ಯಾಯಾಲಯದಲ್ಲಿ ಈ ದಿನ ಅರ್ಜಿದಾರರು ದಾಖಲಾತಿಗಳನ್ನು ಸಲ್ಲಿಸಿದ್ದು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು,

1). ಒಂದು ವಂಶವೃಕ್ಷವನ್ನು ನಿಪಿ 1 ಎಂದು

2). 21 ಮುಟೇಶನ್ ಎಕ್ಸಟ್ರಾಕ್ಟ್ ನ್ನು ನಿಪಿ 2 ರಿಂದ 22 ಎಂದು.

3). 31 ಪಹಣಿ ಪತ್ರಿಕೆಗಳನ್ನು ನಿಪಿ 23 ರಿಂದ 54 ಎಂದು.

4). ಒಂದು ಎಂಡೊರಸ್ ಮೆಂಟ್ ನ್ನು ನಿಪಿ 55 ಎಂದು.

5). ಮೂರು ಡಿ ಸಿ ಬಿಲ್ಲುಗಳನ್ನು ನಿಪಿ 56 ರಿಂದ 58 ಎಂದು.

6). ಎರಡು ಪಂಚಾಯಿತಿ ಮುಟೇಶನ್ ಗಳನ್ನು ನಿಪಿ 59, 60 ಎಂದು.

7). ದೃಢೀಕೃತ ನೊಂದಾಯಿತ ದಾನಪತ್ರ ದಿಃ 17-08-2006 ವನ್ನು ನಿಪಿ 61 ಎಂದು.

8). ಋಣಭಾರ ಪತ್ರವನ್ನು ನಿಪಿ 62 ಎಂದು.

**<u>ಪಾಟೀ ಸವಾಲುಃ ಕೋರಿಕೆ ಮೇರೆಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ.,

ಚನ್ನಗಿರಿ.

**<u>ಪಿಡಬ್ಲ್ಯೂ: 01</u>**

**<u>ದಿಃ 07-12-2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>**

ನ್ಯಾಯಾಲಯದಲ್ಲಿ ಈ ದಿನ ಅರ್ಜಿದಾರರು ದಾಖಲಾತಿಗಳನ್ನು ಸಲ್ಲಿಸಿದ್ದು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು,

9). ದೃಡೀಕೃತ ಪಾಲು ವಿಭಾಗ ಪತ್ರವನ್ನು ನಿಪಿ 63 ಎಂದು.

10). 22 ದೃಡೀಕೃತ ಕ್ರ ಯ ಪತ್ರವನ್ನು ನಿಪಿ 64 ರಿಂದ 85 ಎಂದು.

11). ಎರಡು ದೃಡೀಕೃತ ವೀಲ್ ಪತ್ರವನ್ನು ನಿಪಿ 86 ಮತ್ತು 87 ಎಂದು.

12). ಒಂದು ದೃಡೀಕೃತ ಕ್ರಯ ಪತ್ರವನ್ನು ನಿಪಿ 88 ಎಂದು.

**<u>ಪಾಟೀ ಸವಾಲುಃ ಕೋರಿಕೆ ಮೇರೆಗೆ ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ.,
ಚನ್ನಗಿರಿ.